ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 1828/2014

ಪ್ರಾಸಾ:9

ದಿನಾಂಕ: 12.11.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಡಾ. ಶಿವಕುಮಾರ್ |
| ತಂದೆಯ ಹೆಸರು | : | ಜಿ. ರಾಮ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ವೈದ್ಯಾಧಿಕಾರಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸ.ಸ.ಅ.ರವರಿಂದ:**

ನಾನು 25 ವರ್ಷಗಳಿಂದ ಮಂಜುನಾಥ ಆಸ್ಪತ್ರೆಯಲ್ಲಿ ಮೂಳೆ ತಜ್ಞರಾಗಿ ಸಂದರ್ಶಕ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-1 ರವರು ದಿ: 08-05-2014 ರಂದು ಒಳರೋಗಿಯಾಗಿ ದಾಖಲಾಗಿ ದಿ: 11-05-2014 ರಂದು ಬಿಡುಗಡೆಗೊಂಡಿರುತ್ತಾರೆ. ಸುಮಾರು 10 ವರ್ಷಗಳಾದ ಕಾರಣ ರೋಗಿಗೆ ಸಂಬಂಧಿಸಿದ ಕಡತಗಳನ್ನು ಆಸ್ಪತ್ರೆಯಲ್ಲಿ ಅಡಕವಿಟ್ಟಿರುವುದಿಲ್ಲ. ಕೈಯ ಎರಡೂ ಮೂಳೆಗಳು ಮುರಿತವಾಗಿರುತ್ತದೆ. ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಿರುತ್ತೇವೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಬಿ ಆರ್ ಎನ್ ರವರಿಂದ:**

ಈ ಪ್ರಕರಣದಲ್ಲಿ ಪೊಲೀಸರು ನನ್ನನ್ನು ಸಂಪರ್ಕಿಸಿಲ್ಲ ಎಂದರೆ ಸರಿ. ಗಾಯಾಳುವಿಗೆ ಚಿಕಿತ್ಸೆ ನೀಡಿದ ಬಗ್ಗೆ ನಾನು ತನಿಖಾಧಿಕಾರಿಯವರಿಂದ ಯಾವುದೇ ದೃಡೀಕರಣ ಅಥವಾ ಹೇಳಿಕೆ ನೀಡಿರುವುದಿಲ್ಲ. ಸದ್ರಿ ಗಾಯಾಳುವಿಗೆ ಸಂಬಂಧಿಸಿದ ಚಿಕಿತ್ಸೆ ನೀಡಿರುವ ಬಗ್ಗೆ 10 ವರ್ಷಗಳಾದ ಕಾರಣ ಯಾವುದೇ ಕಡತಗಳು ಇರುವುದಿಲ್ಲ ಎಂದು ದೃಡೀಕರಿಸಿರುತ್ತೇವೆ ಎಂದರೆ ಸರಿ. ಸದ್ರಿ ಆಸ್ಪತ್ರೆಯಲ್ಲಿ ಮೂಳೆ ತಜ್ಞರಾಗಿ ಬೇರೆ ಸಂದರ್ಶಕರು ಕರ್ತವ್ಯ ನಿರ್ವಹಿಸುತ್ತಾರೆ. ಎಕ್ಸರೇ ಮೇಲೆ ಯಾವುದೇ ಹೆಸರು

ಕಂಡು ಬರುವುದಿಲ್ಲ. ಅದನ್ನು ಇಟ್ಟಿರುವ ಲಕೋಟೆ ಯಾರು ಬೇಕಾದರೂ ಬರೆದು ನಮೂದಿಸಿರಬಹುದು ಎಂದರೆ ಸಾಕ್ಷಿ ತನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಎಕ್ಸರೇ ನೋಡಿದಾಗ ಯಾವ ವ್ಯಕ್ತಿಗೆ ಸಂಬಂಧಿಸಿದ್ದು ಎಂದು ಗುರುತಿಸಲಾಗುವುದಿಲ್ಲ ಎಂದರೆ ಸರಿ. ಆದ ಕಾರಣ ಎಕ್ಸರೇ ಚಾಸಾ-1 ರವರಿಗೆ ಸಂಬಂಧಿಸಿದ್ದು ಅಲ್ಲ ಎಂದು ಸೂಚಿಸಿದರೆ ಅಲ್ಲಗಳೆಯಲಾಗುವುದಿಲ್ಲ ಎಂದರೆ ಸರಿ.

ಹಲ್ಲೆಗೆ ಸಂಬಂಧಿಸಿದ ಯಾವುದೇ ಮುದ್ದೆ ಮಾಲುಗಳನ್ನು ಹಾಜರುಪಡಿಸಿ ಅಭಿಪ್ರಾಯ ಪಡೆದಿಲ್ಲ. ಎಕ್ಸರೇಯಲ್ಲಿ ಕಂಡು ಬರುವ ಗಾಯಗಳು ಜಾರಿ ಬಿದ್ದಾಗ ಆಗುವ ಸಾಧ್ಯತೆ ಇರಬಹುದು ಎಂದರೆ ಸರಿ.

<u>**ಮರು ವಿಚಾರಣೆಃ** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**